ಕಲ್ಪನೆ ಕಾವ್ಯ

# ಮುಂಜಾನೆ ಕನಸು



ಕಣ್ಣು ಬಿಡುವ ಹೊತ್ತಿಗೆ
ಬಟ್ಟೆಗಳೆಲ್ಲ ಗಂಟು ಹಾಕಿರೋ ಮೂಟೆಗೆ
ಗಾಡಿ ಕಟ್ಟಬೇಕಿದೆ ಹೊಸ ಗೂಡಿಗೆ
ಇದು ಅಪ್ಪನ ಕನಸಂತೆ.

ಹಸಿರ ಪೈರು ಊರವರ ಉರಿಗೆ ಉಳಿಯಲಿಲ್ಲ
ನಸೀಬ ಶಪಿಸಿ, ಉತ್ತಿದ್ದು ಸಾಕೆನಿಸಿ
ತೋಳ ಕಸುವನ್ನು ನೆಚ್ಚಿ ಹೊರಟಿದ್ದಾನೆ ಅಪ್ಪ
ಇದು ಅಪ್ಪನ ಕನಸಂತೆ.

ಬೇಡದ ಕನಸುಗಳು ನಿಜವಾಗುತ್ತವೆಯಂತೆ
ಹಣೆಬರಹದಲ್ಲಿ ಹೊಗೆಯಿದ್ದರೆ ಮೊದಲೇ ಗೊತ್ತಾಗುತ್ತಂತೆ
ಹುಟ್ಟಿದ ಊರ ಬಿಡುವುದಿಲ್ಲ ಎನ್ನುವ ತನ್ನಪ್ಪನಿಗೆ
ಕೊಟ್ಟ ಮಾತು ಮುರಿದು ನನ್ನಪ್ಪ
ಗಾಡಿ ಕಟ್ಟಬೇಕಿದೆ ಹೊಸ ಗೂಡಿಗೆ–
ಇದು ನಿಜವಾಗದಿರಲಿ ಅಂತ
ಹರಕೆ ಹೊತ್ತಿದ್ದ
ಅಪ್ಪನ ಮುಂಜಾನೆಯ ಕನಸಂತೆ.

**● ಹರೀಶ್ ಕುಮಾರ್ ಜಿ.ಟಿ.**

# ಬದುಕ ಬಂಡಿ

ಮುರಿದ ಬದುಕಿನ ಬಂಡಿಯಲ್ಲಿ
ಕುಳಿತು ನಲಿಯುತ್ತಿಹನೆ ಈ ಕ್ಷಣವ.
ನಿನ್ನೆಯ ಪರಿವಿಲ್ಲ, ನಾಳೆಯ ಅರಿವಿಲ್ಲ
ಇಂದಿನ ಆಟವೇ ಎಲ್ಲಾ.

ಆಗಸದಿ ಮುಸುಕಿದ ಮೋಡದ,
ಬದುಕಿನ ಕತ್ತಲ ಪಯಣದ,
ಬಡತನದಲಿ ಬೇಯುವ
ತಾಯಿತಂದೆಯರ ಕಷ್ಟಗಳು ತಿಳಿದಿಲ್ಲ.
ಅಮ್ಮನ ಮಮತೆಯ ಕೈ ತುತ್ತು,
ಅಪ್ಪನ ಪ್ರೀತಿಯ ಅಪ್ಪುಗೆ,

ಇದುವೇ ಬದುಕು ಅವನಿಗೆ
ಇಲ್ಲ ಯಾವ ಅಲೆದಾಟ ಪರದಾಟ.

ತುತ್ತಿಗಾಗಿ ಅಲೆದು,
ಮನುಜರಿಂದ ದಣಿದು,
ನೆಮ್ಮದಿಯ ಅರಸಿ ಬಂದ ನಾಯಿಗೂ
ನೆರಳಾಗಿದೆ ಮುರಿದ ಬಂಡಿ ಇಂದು.
ಎರಡು ಮುಗ್ಧ ಮನಗಳ
ಆಸರೆಯಾಗಿ ನಿಂತಿದೆ
ಬದುಕಿನ ರೀತಿಯ
ವ್ಯತ್ಯಾಸದ ಅಂತರವಾಗಿ.

**● ಶ್ರಾವಣ ಗಂಗ ಬಿ.ಎಸ್.**